iii) Notification No. RD 60 TRM 86, dated 10 March 1986, Remission of land revenue in respect of 13 villages of Manvi Taluk for the year 1985-86,

as required under sub-section (2) of Section 194 of the Karnataka Land Revenue ct, 1964.

MR. SPEAKER.—Papers laid

SRI P.G.R. SINDHIA(Minister of State for Transport and Housing) Sir I lay

Accounts and Audit Report of the Karnataka State Road Transport Corporation for the year 1983-84,

as required under sub-section (4) of Section 33 of the Road Transport Corporation Act,1950.

MR. SPEAKER,--papers laid

ಶ್ರೀ ಎ ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಇನ್ನೊಂದು ಸಭೆಯ ಮುಂದಿಡಲಾಗುವ ಕಾಗದ ಪತ್ರಗಳನ್ನು ತಮ್ಮ ಅಪ್ಪಣೆ ಕೋರಿ ಸಭೆಯ ಮುಂದಿಡಬಯಸುತ್ತೇನೆ.

ನ್ಯಾಯಮೂರ್ತಿ ಬಿ. ವೆಂಕಟಸ್ವಾಮಿ ಆಯೋಗದ ವರದಿಯನ್ನು ವಿಧಾನ ಮಂಡಲಕ್ಕೆ ಕಳುಹಿಸುವ ಬಗ್ಗೆ.

ಭತ್ತ, ಅಕ್ಕಿ, ಅಕ್ಕಿನುಚ್ಚು, ಪೂವಾ ಇತ್ಯಾದಿಗಳನ್ನು ರಾಜ್ಯದಿಂದ ಹೊರಕ್ಕೆ ಸಾಗಿಸಲು ಅತಿಯಾಗಿ ಆಕ್ಷೇಪಣಾರಹಿತ ಪತ್ರಗಳನ್ನು ನೀಡಲಾಯಿತೆಂಬ ಆರೋಪದ ಬಗ್ಗೆ ವಿಚಾರಣೆ ನಡೆಸಲು ನೇಮಿಸಲಾಗಿದ್ದ ನ್ಯಾಯಮೂರ್ತಿ ಬಿ. ವೆಂಕಟಸ್ವಾಮಿ ಆಯೋಗದ ವರದಿಯ ೩೫೦ ಪ್ರತಿಗಳನ್ನು ವಿಚಾರಣಾ ಆಯೋಗ ಕಾಯಿದೆ ೧೯೫೨ ರಡಿ (೪)ನೇ ಪರಿಚ್ಛೇದದನ್ವಯ ವಿಧಾನ ಸಭೆಯ ಮುಂದಿಡುವ ಸಲುವಾಗಿ ಕಳುಹಿಸಲು ನಾನು ಆದೇಶಿತನಾಗಿದ್ದೇನೆ. ವರದಿಯೊಡನೆ ಆಯೋಗವನ್ನು ನೇಮಿಸಿದ ಅಧಿಸೂಚನೆ ಹಾಗೂ ಆಯೋಗದ ವರದಿಯನ್ನು ಸ್ವೀಕರಿಸಿದ ಸರ್ಕಾರಿ ಆದೇಶದ ಪ್ರತಿಗಳನ್ನು (ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ) ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

MR. SPEAKER.--Papers laid

೧-೦೦ ಪಿ. ಎಂ.

ಗಮನ ಸೆಳೆಯುವ ಸೂಚನೆಗಳು

ಶ್ರೀ ಡಿ. ಟಿ. ಜಯಂಕುಮಾರ್.—ಮಾನ್ಯ ಅಧ್ಯಕ್ಷರೇ, ನಂಜನಗೂಡು ತಾಲ್ಲೂಕಿನ ಬೇಗೂರು ಯಡಿಯಾಲ ರಸ್ತೆಯ ಸುತ್ತ ಮುತ್ತಲಿನ ಗ್ರಾಮಗಳಿಗೆ ಬಂಡೀಪುರ ಅಭಯಾರಣ್ಯದಿಂದ ಬರುವ ಕಾಡಾನೆಗಳಿಂದ ಜನ ಜಾನುವಾರುಗಳಿಗೆ ತೊಂದರೆಯಾಗಿರುವ ವಿಷಯದ ಬಗ್ಗೆ ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಸಚಿವರು ಇಲ್ಲಿ ಇಲ್ಲ. ಆದ್ದರಿಂದ ಇದನ್ನು ಆಮೇಲೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.--ಆಯಿತು, ಶ್ರೀ ಬಿ. ಆರ್. ನೀಲಕಂಠಪ್ಪನವರೇ, ನೀವು ನಿಮ್ಮ ಗಮನ ಸೆಳೆಯುವ ಸೂಚನೆಯನ್ನು ಕೇಳಬಹುದು.